| |
|---|
| C.R.P.67<br>Form No.4 (Civil)<br>Deposition Sheets<br>(R.P.No.57) |

***1** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.*

**S.C.:39/2021**

ಪ್ರಾ.ಸಾ. 3

ಚಾ.ಸಾ. 4

ಪ್ರಮಾಣವಚನ ಬೋಧಿಸಿದ ದಿನಾಂಕ **04.01.2022**

ಸಾಕ್ಷಿದಾರರ ಹೆಸರು: ಶರತ್

ತಂದೆಯ/ಗಂಡನ ಹೆಸರು: ಸಿದ್ದರಾಮೇಗೌಡ

ವಯಸ್ಸು : 31 ವರ್ಷ

ಉದ್ಯೋಗ : ವ್ಯವಸಾಯ

ವಾಸ : ಕ್ಯಾತುಂಗೆರೆ , ಮಂಡ್ಯ

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಶ್ರೀಮತಿ ಶಕೀಲಾ ರವರಿಂದಃ

**1.** ಚಾಸಾ 1, 2 , ಚಾಸಾ 3, 5, 6 ನಮ್ಮ ಊರಿನವರು. ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತು. ಸದರಿ ಆರೋಪಿಗಳು ಚಾಸಾ-2- ಸ್ವಾಮಿಯವರ ಸಂಬಂಧಿಕರು.

**2.** ದಿ 30.09.2020 ರಂದು ಸುಮಾರು ಬೆ.9.00-9.30 ಗಂಟೆ ಸಮಯದಲ್ಲಿ ಮರಿಗೌಡ ಬಡಾವಣೆ , 2 ನೇ ಕ್ರಾಸನಲ್ಲಿ ನನ್ನ ಸ್ನೇಹಿತನಿಗೆ ಮನೆ ಬೇಕಾಗಿತ್ತು. ಚಾಸಾ-2 ರವರ ಮನೆ ಮುಂದೆ ಹೋಗುತ್ತಿದ್ದೆ. ಆಗ ಗಲಾಟೆಯಾಗುತ್ತಿತ್ತು. ಚಾಸಾ-1, 2 ಹಾಗೂ ನ್ಯಾಯಾಲಯದ ಮುಂದಿರುವ ಆರೋಪಿತರ ನಡುವೆ ಮನೆ ರೆಡಿ ಮಾಡಿದ ವಿಷಯಕ್ಕೆ ಗಲಾಟೆಯಾಗುತ್ತಿತ್ತು. ನಾನು ದಾರಿಯಲ್ಲಿ ಹೋಗುತ್ತಿದ್ದಾಗ ಆರೋಪಿಗಳು ಬೋಳಿಮಗನೆ ಎಂದು ಚಾಸಾ 2 ರವರಿಗೆ ಬೋಳಿಮನಗೆ ಎಂದು ಬೈಯ್ಯುತ್ತಿದ್ದ 1 ನೇ ಆರೋಪಿ ಶಂಕರ ಚಾಸಾ 2 ರವರ ಮನೆಯ ಮೇಲೆ ದಿಂಡುಗಲ್ಲು ಹಿಡಿದುಕೊಂಡು ಇದ್ದ. ಉಳಿದ ಆರೋಪಿಗಳು ಕೆಳಗಡೆ ಇದ್ದರು. ಸದರಿ ಆರೋಪಿಗಳ ಬಳಿ ದೊಣ್ಣೆ ಹಾಗೂ ಮಹಿಳಾ ಆರೋಪಿಗಳ ಬಳಿ ಕುಡುಗೋಲುಗಳು ಇದ್ದವು. ಶಂಕರ ಎನ್ನುವವರು ಚಾಸಾ 2 ರವರ ಮೇಲೆ ದಿಂಡುಗಲ್ಲು ಎತ್ತಿಹಾಕಿದ್ದರು. ಚಾಸಾ 2 ರವರು ಆಗ ಮನೆಯ ಬಾಗಿಲ ಮುಂದೆ-ಕೆಳಗಡೆ ಇದ್ದರು. ಇದರಿಂದ ಚಾಸಾ 2 ರವರಿಗೆ ತಲೆಗೆ ಪೆಟ್ಟಾಯಿತು. ಶ್ರಿನಿಧಿ ಹಾಗೂ ಸಿದ್ದಪ್ಪ ಎನ್ನುವ ಆರೋಪಿಗಳು ಚಾಸಾ 2 ರವರಿಗೆ ಮುಖದ ದೊಣ್ಣೆಯಿಂದ ಹೊಡೆಯುತ್ತಿದ್ದರು. ನಂತರ ಶಂಕರ ಎನ್ನುವವರು ಕೆಳಗಡೆ ಬಂದು ದೊಣ್ಣೆಯಿಂದ ಚಾಸಾ 2 ರವರಿಗೆ ಹಲ್ಲೆ ಮಾಡಿದರು. ಕುಡುಗೋಲಿಂದ ಭಾಗ್ಯ , ಗೀತಾ , ಲಕ್ಷಿ ಎನ್ನುವವರು ಚಾಸಾ 2 ರವರಿಗೆ ಹಲೆ ಮಾಡಿರುತ್ತಾರೆ. ನಂತರ ತಿರುಮಲ-ಚಾಸ-1 ಅಲ್ಲಿಗೆ ಬಂದರು. ಅವರಿಗೂ ಕುಡುಗೋಲಿಂದ ಗೀತಾ, ಲಕ್ಷಿ ಎನ್ನುವವರು ಕೈಗಳು, ಬೆನ್ನು ಮೇಲೆ

ಹಲ್ಲೆ ಮಾಡಿರುತ್ತಾರೆ. ಸಿದ್ದಪ್ಪ -ಆರೋಪಿತನು ಚಾಸಾ 1 ರವರಿಗೆ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ಪುಟ್ಟೀರಮ್ಮರವರು ಚಾಸಾ-2-ಸ್ವಾಮಿ ಎನ್ನುವವರಿಗೆ ಹೊಟ್ಟೆಯ ಮೇಲೆ ಒದ್ದರು. ಚಾಸಾ 1 ರವರಿಗೆ ಕೈ, ಬೆನ್ನು ಬಳಿ ಪೆಟ್ಟಾಗಿತ್ತು.

**3.** ಸದರಿ ಗಲಾಟೆಯು ನಡೆಯುವಾಗ ರಾಘು ಮತ್ತು ಜಯಣ್ಣ ಎನ್ನುವವರು ಅಲ್ಲಿಗೆ ಬಂದರು. ನಾನು ಚಾಸಾ 2 ರವರ ಹೆಂಡತಿ ಪೋನು ಮಾಡಿ ವಿಷಯ ತಿಳಿಸಿದೆ. ನಾನು, ರಾಘು ಮತ್ತು ಜಯಣ್ಣ ರವರು ಚಾಸಾ 1, 2 ರವರನ್ನು ಮಂಡ್ಯ ಆಸ್ಪತ್ರೆಗೆ ಸೇರಿಸಿದೆವು.

**4.** ಆರೋಪಿಗಳು ಚಿಕ್ಕವೀರಭದ್ರ ಹೇಳಿದಂತೆ ಮಾಡಿದ್ದೇವೆ ಈಗ ಎಲ್ಲ ದಿಕ್ಕಾಪಾಲು ಆಗಿ ಹೊರಟುಹೋಗಿ ಎಂದು ಹೋದರು.

**5.** ಚಾಸಾ 2 ರವರ ಹೆಂಡತಿ ಆಸ್ಪತ್ರೆಗೆ ಬಂದು ವೈದ್ಯರು ಹೇಳಿದಂತೆ ಚಾಸಾ 2 ರವರನ್ನು ಮುಂದಿನ ಚಿಕಿತ್ಸೆಗೆ ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋದರು. ಚಾಸಾ 1 ರವರು ಅವರ ಜೊತೆ ಇದ್ದರು, ಅವರಿಗೆ ಏನಾಯಿತು ಗೊತ್ತಿಲ್ಲ.

**6.** ದಿಂಡುಗಲ್ಲು, ದೊಣ್ಣೆ ಹಾಗೂ ಕುಡುಗೋಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 6 ನ್ನು ನೋಡಿ ಗುರುತಿಸಿರುತ್ತಾರೆ.

**7.** ಸಾಕ್ಷಿಗೆ ಈಗ ತೋರಿಸಿದ ನಿಪಿ-11-ದಾಖಲಾತಿಯಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು , ಸಾಕ್ಷಿ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನುದಿ 01.10.2020 ರಂದು ನಾನು ಠಾಣೆಯಲ್ಲಿ ಮಾಡಿರುತೇನೆ. ಪೊಲೀಸರು ನನ್ನನ್ನು ಹಾಗೂ ಜಯಣ್ಣ ನನ್ನು ಠಾಣೆಗೆ ಕರೆದಿದ್ದರು. ಗಲಾಟೆ ಕಾಲದಲ್ಲಿ ಚಾಸಾ 1, 2 ರವರು ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಮು ಮಾ ಗಳನ್ನು ಠಾಣೆಯಲ್ಲಿ ವಶಪಡಿಸಿಕೊಂಡರು. ಸರಿದ ಮು ಮಾ ಗಳನ್ನು ಗಲಾಟೆಯಾದ 10 ದಿನಗಳ ಒಳಗಡೆ ಅಮಾನತ್ತುಪಡಿಸಿಕೊಂಡಿರುತ್ತಾರೆ. ಚಾಸಾ 1 ರವರು ಠಾಣೆಗೆ ಸದರಿ ಮು ಮಾ ಗಳನ್ನು ನೀಡಿರುತ್ತಾರೆ. ಸಾಕ್ಷಿಗೆ ಸದರಿ ಮು ಮಾಲುಗಳನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮು ಮಾ 9 ರಿಂದ 13 ಎಂದು ಗುರುತಿಸಲಾಗಿದೆ. ಸದರಿ ಮಹಜರಿಗೆ ನಾನು ಹಾಗೂ ಜಯಣ್ಣ ಸಹಿ ಮಾಡಿರುತ್ತೇವೆ.

**8.** ಸದರಿ ದಿನ ಜಮೀನು ಲಿಟಿಗೇಶನ್ ಇದೆ, ಅದರ ಬಗ್ಗೆ ಈ ಗಲಾಟೆಯಾಗಿದೆ ಎಂಬ ವಿಚಾರ ತಿಳಿಯಿತು.

**9.** ಸಾಕ್ಷಿಗೆ ಪಂಚನಾಮೆಯ ನೋಟೀಸು ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಪೊಲೀಸರು ಸದರಿ ನೋಟೀಸನ್ನು ನೀಡಿರುತ್ತಾರೆ. ನೋಟೀಸನ್ನು ನಿಪಿ 18 ಎಂದು, ಸಾಕ್ಷಿ ಸಹಿಯನ್ನು ನಿಪಿ 18 ಎ ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಆರ್ ವಿ ವಕೀಲರಿಂದಃ

ಆರೋಪಿ ಪರ ವಕೀಲರು ಹಾಜರಿದ್ದು ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಓ.

**(ನಾಗಜ್ಯೋತಿ ಕೆ.ಎ.)**
**1** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ**.**